॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXXI No. 12 | OCTOBER 2022 | Pages 16 | Rs. 2/-



HAVYAKA MANAGING COMMITTEE

## ಮುಂಬರುವ ಕಾರ್ಯಕ್ರಮಗಳು

### "ಸೂರಿ ಪರ್ವ – ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಜೀವನ ಸಾಧನೆ"

### ಕೃತಿ ಬಿಡುಗಡೆ ಕಾರ್ಯಕ್ರಮ

ಲೇಖಕರು : **ಶಶಿಕಲಾ ಹೆಗಡೆ**

**ದಿನಾಂಕ : 8 ಅಕ್ಟೋಬರ್, 2022 • ಸಮಯ : ಬೆಳಿಗ್ಗೆ 10-45 ರಿಂದ**

**ಸ್ಥಳ : ಹವ್ಯಕರ ಸಭಾಗೃಹ,** ದೀಪ್ತಿ ಸೊಲಿಟೇರ್, 4ನೆಯ ಮಹಡಿ,
ಎಮ್.ಜಿ. ರೋಡ್ ಮತ್ತು ಎಲ್.ಬಿ.ಎಸ್. ಮಾರ್ಗ್ ಜಂಕ್ಷನ್,
ಹಳೆಯ ಪೋಸ್ಟ್ ಆಫೀಸ್ ಹತ್ತಿರ, ಘಾಟ್‌ಕೋಪರ್ ಪಶ್ಚಿಮ, ಮುಂಬಯಿ - 400 086.

*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

# Glimpses of Entertainment Programme



***PAGE DONATED BY : SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

| | | |
|---|---|---|
| ***Hon. Editor*** | : | Smt. Amita S. Bhagwat |
| ***Editorial Committee*** | | Smt. Shashikala Hegde<br>Smt. Tanuja Hegde<br>Shri Umesh Hegde<br>Shri Ganesh Bhat<br>Smt. Shailaja Hegde |
| ***Publisher*** | : | Narayan Akadas R.<br>Hon. Gen. Secretary |
| ***Printed at*** | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Sanjay Bhat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | Vasant Bhat |
| ***Hon. Treasurer*** | : | Gautam Upadhya |

***Elected Members :***

| | |
|---|---|
| Smt. Tanuja Hegde | G. S. Bhat |
| Smt. Shashikala Hegde | Vishnu Bhagwat |
| Ramana Bhat | Ramesh Vaidya |
| Umesh Hegde | Chidanand Bhagwat |
| Anant Bhat | |

***Co-opted Members :***
Umesh Maskeri, Chandrashekhar Joshi, G. V. Hegde

***ಸಂಪಾದಕೀಯ***

# ದೇವಿ ಬಂದಳೇ



ಪ್ರತಿ ಬಾರಿ ಯುಗಾದಿ ಹಬ್ಬ ಬರುವಾಗ ಬೇಂದ್ರೆಯವರ 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಹಾಡು ಕಿವಿಯಲ್ಲಿ ಗುಂಯ್‌ಗುಡುತ್ತದೆ. ನವರಾತ್ರಿ ಬಂದೊಡನೆ ಶ್ರೀ ದೇವಿಯ ಅನೇಕ ಹಾಡುಗಳು ಮನದಲ್ಲಿಯೇ ಝೇಂಕರಿಸಿ, ದುರ್ಗೆಯ ಹಲವಾರು ರೂಪಗಳು ಕಣ್ಣೆದುರಿಗಿದ್ದರೆ, ದೀಪಾವಳಿಯಲ್ಲಿ ಅವಳು ಲಕ್ಷ್ಮಿಯ ರೂಪದಲ್ಲಿ ಮನೆಯನ್ನು ಪ್ರವೇಶಿಸುತ್ತಾಳೆ ಎನ್ನುವ ಭಾವನೆಯಿಂದ ಮನಸ್ಸು ಭಕ್ತಿಪರವಶವಾಗುತ್ತದೆ.

ಪ್ರಕೃತಿಯೂ ಶ್ರೀ ದೇವಿಯಂತೆ ನಾನಾಲಂಕಾರ ಭೂಷಿತೆ. ಎಷ್ಟು ಕೋಮಲೆಯೋ ಅಷ್ಟೇ ಕಠಿಣಳು. ನಮ್ಮನ್ನು ಪೊರೆಯುತ್ತಾಳೆ, ಅದೇ ಸಮಯದಲ್ಲಿ ನಿಷ್ಠುರಳೂ ಆಗಬಲ್ಲಳು. ಮಂದಾನಿಲವು ಯಾವ ಗಳಿಗೆಯಲ್ಲಿ ಚಂಡಮಾರುತವಾಗುತ್ತದೆಯೋ, ಜುಳುಜುಳು ಹರಿಯುವ ನಿನಾದ ಯಾವಾಗ ಪ್ರಳಯವಾಗುವುದೋ ಬಲ್ಲವರ್ಯಾರು? ಮಂದಹಾಸಿನಿ ಯಾವಾಗ ಮಹಾಕಾಳಿಯಾಗುತ್ತಾಳೆ ಎನ್ನುವ ಮರ್ಮವನ್ನು ಅರಿತವರ್ಯಾರು?

ನಾವು ಕೂಡ ಪ್ರಕೃತಿಯ ಸ್ವರೂಪವೇ ಎಂದು ಅರಿತುಕೊಂಡಾಗ ದೇವಿಸ್ತುತಿಯ ಮಹಾತ್ಮೆ ಅರ್ಥವಾಗುತ್ತದೆ. ಎಲ್ಲ ಪ್ರಾಣಿಗಳಲ್ಲಿ ದಯೆಯ ರೂಪದಲ್ಲಿ, ಮಾತೃರೂಪದಲ್ಲಿ, ಕಾಂತಿ ರೂಪದಲ್ಲಿ, ಶ್ರದ್ಧೆಯ ರೂಪದಲ್ಲಿ, ದಯೆಯ ರೂಪದಲ್ಲಿ, ಶಕ್ತಿಯ ರೂಪದಲ್ಲಿ ನೆಲೆಸಿರುವ ದೇವಿಯನ್ನು ನಾವು ಸ್ತುತಿಸುತ್ತೇವೆ. ಇಲ್ಲಿ ಪ್ರಾಣಿ ಹಾಗೂ ಮನುಷ್ಯರ ನಡುವೆ ಭೇದಭಾವವಿಲ್ಲ. ಸ್ತ್ರೀ ಪುರುಷರೆಂಬ ವಿಂಗಡನೆಯೂ ಇಲ್ಲ. ಅರ್ಧನಾರೀಶ್ವರನ ಪ್ರತಿಮೆ ಸೃಷ್ಟಿಯ ಈ ಸಂದೇಶದ ಸಾಕಾರ. ಸಕಲ ಚರಾಚರ ಜೀವಿಗಳಲ್ಲಿರುವ ಚೈತನ್ಯಸ್ವರೂಪವೇ ದೈವೀಶಕ್ತಿಯ ಪ್ರತಿಫಲನ ಎನ್ನುವುದು ನಮ್ಮ ಆಧ್ಯಾತ್ಮಸಾರ.

ಶೌರ್ಯ ಮಹಿಳೆಯರಲ್ಲಿಯೂ ಇದೆ. ಸುಕೋಮಲ ಭಾವನೆಗಳು ಪುರುಷರಲ್ಲಿಯೂ ಇದೆ. ಯಾರೂ ಮೇಲಲ್ಲ, ಕೀಳಲ್ಲ. ಎಲ್ಲರೂ ಪ್ರಕೃತಿಯ ನಿಯಮಕ್ಕೆ ಒಳಗಾದವರು. ಒಂದೇ ಸೂತ್ರದಲ್ಲಿ ಬಂಧಿಸಲ್ಪಟ್ಟಿರುವವರು. ಬದಲಾದ ಕಾಲಘಟ್ಟದಲ್ಲಿ ಮಹಿಳೆಯರ ಸಾಮರ್ಥ್ಯವು ವಿವಿಧ ರೂಪದಲ್ಲಿ, ಈ ಸಮಾಜಕ್ಕೆ, ಈ ನಾಡಿಗೆ ಸಕಾರಾತ್ಮಕವಾದ ಆಯಾಮವನ್ನು ಕೊಡುತ್ತಿದೆ.

ದೇವಿ ಬಂದಳೇ ಸಿರಿದೇವಿ ಬಂದಳೇ
ಚೌರಿ ರಾಗಟೆ ಹಾಕಿದ ಚೆಲುವೆ ಬಂದಳೆ

ಎನ್ನುವ ಜಾನಪದ ಶೈಲಿಯ ದೇವಿಯ ಹಾಡು ನೆನಪಾಗುತ್ತದೆ. ಇಲ್ಲಿ ದೇವಿಯನ್ನು 'ಚೆಲುವೆ' ಎಂದು ಕೊಂಡಾಡಲಾಗಿದೆ. ಚೆಲುವು ಕೇವಲ ಬಾಹ್ಯಸೌಂದರ್ಯವನ್ನು ಪ್ರತಿಫಲಿಸುವುದಿಲ್ಲ. ಅದು ನಮ್ಮ ವಿಚಾರಗಳಲ್ಲಿ ಹರಿದಾಡುತ್ತಿರುತ್ತದೆ. ನಮ್ಮ ನಡವಳಿಕೆಗಳಲ್ಲಿ ವ್ಯಕ್ತವಾಗುತ್ತದೆ. ನಮ್ಮ ಹೃದಯದಲ್ಲಿ ನೆಲೆಯೂರುತ್ತದೆ. ಶ್ರೀ ದೇವಿಯ ಚೆಲುವು ಅವಳ ಅಂತರಂಗದ ಹಿರಿಮೆಯಲ್ಲಿ, ಸಾಮರ್ಥ್ಯದ ಗರಿಮೆಯಲ್ಲಿ ಹೊರಹೊಮ್ಮುತ್ತದೆ.

ಹಿಂದಿನ ಕಾಲದಲ್ಲಿ ಗೌರವಾನ್ವಿತ ಮಹಿಳೆಯರನ್ನು ದೇವಿ ಎಂದು ಕರೆಯುವ ಪ್ರತೀತಿ ಇತ್ತು ಎಂದು ತಿಳಿದುಬರುತ್ತದೆ. ಒಳ್ಳೆಯತನದೊಂದಿಗೆ ಸಾಮರ್ಥ್ಯವೂ ಸೇರಿಕೊಂಡಾಗ ವ್ಯಕ್ತಿತ್ವಕ್ಕೊಂದು ಮೆರಗು ಬರುತ್ತದೆ.

ಎಲ್ಲ ರಂಗಗಳಲ್ಲಿಯೂ ತಮ್ಮ ಹೆಜ್ಜೆ ಗುರುತನ್ನು ಮೂಡಿಸಿರುವ ಮಹಿಳೆಯರು ತಮ್ಮ ನಡಿಗೆಯನ್ನು ಇನ್ನಷ್ಟು ತ್ವರಿತಗೊಳಿಸಲಿ.

**ಎಲ್ಲರಿಗೂ ನವರಾತ್ರಿಯ ಹಾಗೂ ದೀಪಾವಳಿಯ ಶುಭಾಶಯಗಳು.**

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE***

# *From The President's Desk*



Dear Friends,

It gives me a great pleasure to address you, after the holding of Annual General Body Meeting. It was for the first time that AGM was held within a period of 4 months. However, it was needed statutorily as we could not hold the meeting during lockdown period.

The AGM started with a new spirit. We were off mask. The environment was cheerful as if it was a new dawn. In the first half of the day different competitions held for our members cheered up everyone. Items were displayed on the table as a part of cooking competition. Antakshari and Standup comedy competitions added freshness. Post lunch the AGM was held.

The days spent in isolation, now looks like a bad dream. We could not hold program but were remembering programs held in the recent past. We had an orchestra program, Hindustani concert, a National Level Poetry competition, Comedy show, performance by child artist etc. Many also enjoyed Talamaddale and Geeta Ramayana. We also had the opportunity of listening to very good speakers who came from our native State specially for us. As informed earlier the Trust is also giving platform to our members and their children. Our KVSS program is well appreciated by the Kannadigas. The Women Convention has also become popular as topics pertaining to women and also for the general wellbeing are discussed. We felicitate senior members each year and also students who have secured very good marks. All the programs were possible with proper co-ordination amongst the committee members. Each of them took responsibility in ensuring that the program was a success. My sincere thanks to them.

As you all know a new team of committee members is now formed. We have made a beginning with AGM and we know there is a long way to go. We want to involve youths. I request our members to encourage the younger generation to come forward and participate in the programs.

If any organization or institution has to be successful it should have both vision and mission. We should have a broad view of the long run functioning of the Trust where we can expand both cultural and welfare activities. The Trust should stand like pillar of strength to all Havyakas in Mumbai. Our objective can be fructified only when we take steps towards its fulfilment. We should have a systematic approach. As we fix targets, we should also share responsibilities. We are all one and shall remain the same.

Best wishes for Navaratri and wishing you all Happy Deepavali.

With Regards,

**S. P. BHAGWAT**
**President**

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

ಗಣಪತಿ ಭಟ್ಟಿ

*(ಕಳೆದ ಸಂಚಿಕೆಯಿಂದ)*

**ವರಮಹಾಲಕ್ಷ್ಮೀ ವ್ರತ :-**

ಒಟ್ಟಿನ ಮೇಲೆ ಈಗಿನಂತೆ ಆಗಿನ ಕಾಲಕ್ಕೆ ಬರೇ ಪುಸ್ತಕೀವಿದ್ಯೆಕ್ಕೆ ಮಹತ್ವವಿದ್ದಿಲ್ಲೆಂದು ಸ್ಪಷ್ಟವಾಗುತ್ತದೆ. ಇದರಿಂದಲೇ ಪ್ರಾಚೀನ ಮಹಾರಾಜರು ಸಹ ವೇದವಿದ್ಯೆಯನ್ನು ಬಲ್ಲವರಿದ್ದರೆಂದು ವರ್ಣಿಸುವಾಗಲೇ ಹಲವು ಕಲೆಗಳನ್ನೂ ಗಣಿತ, ಅಶ್ವ, ಗಜ ಲಕ್ಷಣಗಳು ಅವುಗಳ ಶಿಕ್ಷಣಗಳು ಇತ್ಯಾದಿ ವ್ಯವಹಾರೋಪಯುಕ್ತವಾದ ವಿಷಯಗಳನ್ನು ಬಲ್ಲವರಿದ್ದರೆಂದು ಪುರಾಣೇತಿಹಾಸಾದಿಗಳಲ್ಲಿ ಹೇಳಿದ್ದು ಕಂಡು ಬರುತ್ತದೆ. ಇಂಥ ವಿದ್ಯೆಗಳಿಗೆಲ್ಲ ಆಗರವಾದದ್ದು ಋಷಿಗಳ ಆಶ್ರಮವಾಗಿತ್ತು. ಇಂಥ ಆಶ್ರಮಗಳಿಗೆ ಹೋಗಿ ಉಳಿದು ಮಹಾರಾಜರ ಮಕ್ಕಳು ಸಹ ಸಾಮಾನ್ಯರಂತೆ ಗುರುಶುಶ್ರೂಷೆ ಮಾಡಿ ವಿದ್ಯಾರ್ಜನೆ ಮಾಡುತ್ತಿದ್ದರೆಂಬುದು ನಿರ್ವಿವಾದವಾಗಿ ಕಂಡು ಬರುತ್ತದೆ. ಹೀಗೆ ಗುರುಕುಲಗಳಿಂದ ಹೊರಡುವ ವಿದ್ಯಾರ್ಥಿಗಳು ಪಟ್ಟಣದ ವ್ಯಸನಗಳಿಂದ ಅಲಿಪ್ತರಾಗಿರುತ್ತಿದ್ದರಿಂದಲೇ ತೇಜಃಪುಂಜರೂ, ಸ್ವಾವಲಂಬಿಗಳೂ, ಸದಾಚಾರಿಗಳೂ, ಧೈರ್ಯ ಔದಾರ್ಯಾದಿ ಸದ್ಗುಣ ಮಂಡಿತರೂ, ಗುರು ಹಿರಿಯರಲ್ಲಿ ಪೂಜ್ಯ ಬುದ್ಧಿಯುಳ್ಳವರೂ ಆಗಿರುತ್ತಿದ್ದರು. ಇದನ್ನು ತಿಳಿದೇ ಡಾ। ರವೀಂದ್ರನಾಥ ಟಾಗೋರ, ಮಹಾತ್ಮಗಾಂಧಿ ಮೊದಲಾದವರು ಇಂಥ ಗುರುಕುಲಗಳನ್ನು ಸ್ಥಾಪಿಸಹತ್ತಿದರು.

ಒಟ್ಟಿಗೆ ಈ ಮೇಲಿನ ವಿವೇಚನೆಗಳಿಂದ ಉತ್ಸರ್ಜನೋಪಾಕರ್ಮಗಳು ಬರೇ ವಿದ್ಯಾರ್ಜನೆಯಲ್ಲಿ ತೊಡಗಿದವರಿಗಷ್ಟೇ ಅವಶ್ಯಕವೆಂತಲೂ, ಸಮಾವರ್ತನ ಹೊಂದಿದವರಿಗೂ ಗೃಹಸ್ಥರಿಗೂ ಅನವಶ್ಯಕವೆಂತಲೂ ಧ್ವನಿತವಾಗಬಹುದು. ಆದರೆ ಇಂಥವರಿಗೆ ಸಹ ವಾಣಿಜ್ಯ ಕೃಷಿ ಮೊದಲಾದ ವ್ಯವಹಾರಗಳಿಂದ ಧನಾರ್ಜನೆಯನ್ನು ಮಾಡುವುದಕ್ಕೂ, ಕಲಿತ ವೇದಾದಿಗಳ ಆವರ್ತನವನ್ನು ಮಾಡುವುದಕ್ಕೂ ಭಿನ್ನ ಭಿನ್ನ ಕಾಲಗಳಿರುವುದು ಅವಶ್ಯವೇ ಸರಿ.



ಈ ಶ್ರಾವಣೀ ವಿಧಿಗೆ ಮೂಲವಾದದ್ದು ಉಪನಯನ ಸಂಸ್ಕಾರವಾದ್ದರಿಂದ ಈ ಉಪನಯನ ಸಂಸ್ಕಾರದ ಬಗ್ಗೆ ಸ್ವಲ್ಪ ಬರೆಯುವುದು ಅಪ್ರಸ್ತುತವಾಗಲಾರದು. ಈ ಸಂಸ್ಕಾರದಿಂದ ದ್ವಿಜತ್ವವು ಪ್ರಾಪ್ತವಾಗುವುದು. ದ್ವಿಜ, ಅಂದರೆ ಎರಡು ಸಾರೆ ಜನ್ಮ ಹೊಂದಿದವನು. ತಾಯಿ-ತಂದೆ ಗಳಿಂದಾದ ಜನ್ಮ ಒಂದು; ಮಾತಾ ಗಾಯತ್ರೀ, ಪಿತಾ ಆಚಾರ್ಯ ಇವರಿಂದುಂಟಾದ ಜನ್ಮ ಮತ್ತೊಂದು. ಈ ದ್ವಿಜತ್ವಕ್ಕೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರು ಅಧಿಕಾರಿಗಳು.

'ಗರ್ಭಷ್ಟಮೇऽब्दे कुर्वीत ब्राह्मणस्योपनायनम् । गर्भदिकादशे राज्ञो गर्भात्तु द्वादशे विश : ।।' ಬ್ರಾಹ್ಮಣನಿಗೆ *ಗರ್ಭಾಷ್ಟಮ ಅಂದರೆ ಜನ್ಮದಿಂದ* 7ನೇ ವರ್ಷದಲ್ಲಿ, ಕ್ಷತ್ರಿಯನಿಗೆ 11ನೇ ವರ್ಷದಲ್ಲಿ, ವೈಶ್ಯನಿಗೆ 12ನೇ ವರ್ಷದಲ್ಲಿ ಉಪನಯನ ಮಾಡತಕ್ಕದ್ದು, ಎಂದು ಶಾಸ್ತ್ರವಿದೆ. ನಿರ್ದಿಷ್ಟವಾದ ಈ ವಯಸ್ಸಿನ ಹೊರತಾಗಿ ಇತರ ಗೌಣ ಕಾಲವೂ ಹೇಳಲ್ಪಟ್ಟಿದೆ. ಸ್ಮೃತಿ ಕಾಲಕ್ಕಿಂತ ಮೊದಲು ವಿದ್ಯಾರ್ಥಿಯು ಯೋಗ್ಯ ವಯಸ್ಕನಾಗಲು ಯಾವನಾದರೊಬ್ಬ ಗುರುವಿನ ಕಡೆಗೆ ಹೋಗಿ ತನ್ನನ್ನು ಶಿಷ್ಯನನ್ನಾಗಿ ಮಾಡಿಕೊಂಡು ವಿದ್ಯಾದಾನ ಮಾಡಬೇಕಾಗಿ ಪ್ರಾರ್ಥಿಸುತ್ತಿದ್ದನೆಂದೂ, ಆ ಗುರುವು ಯುಕ್ತಸಂಸ್ಕಾರ (ಉಪನಯನ ಸಂಸ್ಕಾರ) ಮಾಡಿ ಗಾಯತ್ರೀ ಉಪದೇಶ ಹಾಗೂ ಉಳಿದ ವಿದ್ಯೋಪದೇಶಗಳನ್ನು ಮಾಡುತ್ತಿದ್ದನೆಂದೂ ಕಂಡು ಬರುತ್ತದೆ.

*(ಮುಂದುವರಿಯುವುದು)*

**ಮೈಸೂರು ಅಸೋಸಿಯೇಷನ್, ಮುಂಬೈ – The Mysore Association, Mumbai**

**ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ-2022**

ಮೈಸೂರು ಅಸೋಸಿಯೇಷನ್ ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡ ಕನ್ನಡ ಕಥಾ, ಕವನ, ನಾಟಕಗಳ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದೇ ಸರಣಿಯಲ್ಲಿ ಮೂರನೆಯ "ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ"ಯನ್ನು ಆಯೋಜಿಸಿದೆ. ಈ ಸ್ಪರ್ಧೆಯಲ್ಲಿ ವಿಶ್ವದ ಎಲ್ಲ ಆಸಕ್ತರು ಭಾಗವಹಿಸಬಹುದಾಗಿದೆ. ನಾಟಕ ರಚನಾಕಾರರು ಯಾವುದೇ ವಿಷಯದ ಕುರಿತಂತೆ ನಾಟಕಗಳನ್ನು ರಚಿಸಬಹುದಾಗಿದೆ. ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಪ್ರಥಮ ಬಹುಮಾನ 15,000/-, ದ್ವಿತೀಯ ಬಹುಮಾನ 10,000/-, ತೃತೀಯ ಬಹುಮಾನ 7,500/-

**ಸ್ಪರ್ಧೆಯ ನಿಯಮಾವಳಿಗಳು :** 1) ನಾಟಕಗಳು ಏಕಾಂಕ ನಾಟಕವಾಗಿದ್ದು ಸ್ವಂತ ರಚನೆಯಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು. ಕನ್ನಡದಲ್ಲಿಯೇ ಇರಬೇಕು. 2) ನಾಟಕಗಳು ಸುಮಾರು 30 ಪುಟಗಳ ಮಿತಿಯಲ್ಲಿರಲಿ. ನಾಟಕವನ್ನು ಪ್ರದರ್ಶನ ಮಾಡಿದರೆ 45-50 ನಿಮಿಷಗಳ ಒಳಗೆ ಮುಗಿಯುವಂತಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದು ಕಳುಹಿಸಿ. (ಕೈಬರವಣಿಗೆ ಅಥವಾ ಕಂಪ್ಯೂಟರ್ ಮುದ್ರಿತ). ಇಮೈಲ್ : nataka.nesaru@gmail.com ಮೂಲಕವೂ ಕಳುಹಿಸಬಹುದು. 3) ನಾಟಕಕಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇಮೈಲ್ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಿ. 4) ಒಬ್ಬರು ಒಂದೇ ನಾಟಕವನ್ನು ಕಳುಹಿಸಬೇಕು. 5) ಸ್ಪರ್ಧೆಗೆ ಬಂದ ನಾಟಕಗಳನ್ನು ಮರಳಿಸಲಾಗುವುದಿಲ್ಲ, 6) ತೀರ್ಪುಗಾರರ ತೀರ್ಮಾನವೇ ಅಂತಿಮ. 7) ನಾಟಕಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 15/11/2022. 8) ತೀರ್ಪುಗಾರರ ತೀರ್ಮಾನವನ್ನು ಜನವರಿ ತಿಂಗಳಿನಲ್ಲಿ ಜಾಹೀರುಗೊಳಿಸಲಾಗುವುದು.

**ಕಮಲ. ಕೆ.** (ಅಧ್ಯಕ್ಷರು ಮೈಸೂರು ಅಸೋಸಿಯೇಷನ್, ಮುಂಬೈ),
**ಡಾ. ಗಣಪತಿ ಶಂಕರಲಿಂಗ** (ಗೌ. ಕಾರ್ಯದರ್ಶಿ, ಮೈಸೂರು ಅಸೋಸಿಯೇಷನ್, ಮುಂಬಯಿ)
**The Mysore Association Mumbai,** 393, Bhau Daji Road, Matunga (E), Mumbai - 400019.
Tel. : 022 24037065 • Mob. : 9920966497 • Email : nataka.nesaru@gmail.com.

*PAGE DONATED BY : **SHRI N. R. HEGDE, DOMBIVLI***

# AGM REPORT

'Havyakas are believed to have come from Ahichatra from North India, as per the wishes of Mayur Varma to put Havis (ghee) in Yagna and Yaga. Apart from performing rituals, we were also agriculturists. With changing times, Havyakas have also exhibited their capabilities in different fields and moved to different cities. We, Havyakas, having our address at Mumbai, feel the need to come together to experience oneness' said Shri Shivkumar Bhagwat, the President, while addressing members of Havyaka Welfare Trust, in 58th Annual Meeting held at Havyakara Sabhagraha on 28th August, 2022.

He thanked all the committee members who were working hard selflessly for the smooth functioning of the Trust. He explained how the activities of the Trust was expanded and remembered various quality programs held by the Trust before covid time and said that it was possible because of the cooperation and participation of our members. He stressed the need to include more youngsters in the mainstream of the activities of the Trust.

The function started with the prayer by Smt. Saroja Hegde. Vice President Sanjay Bhat explained the current status and the financial position of the Trust. With the consent of the members, 56th and 57th AGM minutes and Annual reports were approved and adopted. After a brief discussion and deliberation, Income and Expenditure Account and Balance Sheet for the year ended on 31.3.2022 were approved and adopted.

Shri. K. N. Bhat proprietor of M/S N.K. Bhat & Company were reappointed as Statutory Auditor for the year 2022-2023. Shri Mahesh Hegde was reappointed as the Internal Auditor for the year 2022-2023. A committee comprising Dr. Dinesh Hegde, Shri. V. N. Hegde, Shri Rajaram Hegde, Dr. Prasad Bhat, Shri G. V. Hegde, Shri K. S. Bhat & Shri Ganesh Bhat was formed to give suggestions to Managing Committee for the maximum utilisation of Havyakara Sabhagraha, Ghatkopar. Another committee comprising of Shri Manjunath Bhat, Dr. Prasad Bhat, Shri Ganesh Bhat, Smt. Hema Hegde, Shri Shivanand Hegde, Smt. Manjula Bhat & Shri N.R.Hegde was formed to give suggestions to the Managing Committee regarding maximum utilisation of Dhyana Mandir.

Shri. Prakash Rao, Hon. Returning Officer was invited by Hon. Gen. Secretary to announce the names of seven new Managing Committee Members elected unanimously for the year 2022-2023 & 2023-2024. Shri. Prakash Rao declared Shri. Shivkumar Bhagwat, Shri. Sanjay Bhat, Smt. Tanuja Hegde, Shri. Vishnu Bhagwat, Shri. Vasant Bhat, Shri. Ganesh Bhat and Shri. Ramana Bhat as elected unopposed. The Meeting concluded with a vote of thanks from Vice President Shri. Sanjay Bhat.

Entertainment programs held in the morning session delighted the audience. Antakshari of Kannada and Hindi film songs were held in different rounds like starting a song with the last alphabet of previous song, recognizing Pallavi of the song after listening to Charana, starting a song with the given word, starting a song with double words. Interesting questions were also asked to the audience. Smt. Aparna Bhat and Shri Chandrashekhar Joshi conducted Antakshari program. The team comprising of Smt. Kavya Bhagwat, Smt. Kala Bhagwat, Smt. Shashikala Hegde and Shri. Rokhesh Hegde secured the First prize and the team comprising of Smt. Shanta Bhat, Smt. Tanuja Bhat , Smt. Roopa Bhat, Smt. Shashikala Rao secured second prize.

Standup Comedy Show held thereafter enthralled the audience. The spirit of the participants was highly appreciated. Shri. Chandrasekhar Joshi was crowned with 'Havyaka Hasya Raja' title. Smt. Shanta Bhat was secured second prize, Shri. G. V. Hegde, Mulund and Shri Ramesh Vaidya co-operated as judges.

Cooking competition was held and display of eatables made from Poha (Flattened Rice) was eye catching. Eatables made from Poha were classified into sweet and spicy category. The display gave a surprise to onlookers that so many items could be prepared from Poha. Smt. Hema Hegde secured first prize, Smt. Shanta Bhat secured second prize, Smt. Saroja Hegde and Kumari Sushma Hegde Shared third prize in the category of sweet preparation. Smt. Uma Kameshwar secured first prize, Smt. Usha Kodlakere secured second prize, Smt. Roopa Bhat secured third prize in the category of spicy preparation. Smt. Sukanya Ravindra and Smt. Poornima Akadas judged the cooking competition. Delicious lunch was served to all. Smt. Shashikala Hegde compered for the program.

The program ended with National Anthem.

*PAGE DONATED BY : **AKADAS & FAMILY***

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

ಇನ್ನೇನು ಮಹಾಲಕ್ಷ್ಮಿ ಬಂತು. ಜೀವವನ್ನೇ ಕಣ್ಣಲ್ಲಿಟ್ಟುಕೊಂಡು ಹಸ್ತಾಕ್ಷರ ಹೊರಗೆ ಚಿಮ್ಮಿದ. ಇಳಿದ ಜನರ ಬಿಂಬಗಳು ಚದುರುತ್ತಿರುವಾಗಲೇ ಅವುಗಳ ನಡುವಿಂದಲೇ ಮೂಡಿದ ನಿಶ್ಚಲ ದೇವರಂತೆ ನಿಂತ ಬಾಬಾ ಕಂಡ. ಬಾಯಿಗೆ ಏನೂ ಶಬ್ದ ಬರದೇ ಹಸ್ತಾಕ್ಷರ ಹೋಗಿ ಬಾಬಾನನ್ನು ತಬ್ಬಿಕೊಂಡ. ಸಾನೆ ಚಿಮ್ಮಿ ಬಂದು 'ಕಾಕಾ.. ನಮ್ಮ ಜೀವವೇ ಉಡುಗಿ ಹೋಗಿತ್ತು' ಎಂದ. ಬಾಬಾ ಅತ್ಯಂತ ನಿರ್ವಿಕಾರವಾಗಿ 'ಅಂಥದ್ದೇನಿಲ್ಲ. ಜನ ಒಳ್ಳೆಯವರು. ನಾನು ಒಬ್ಬನೇ ಹೊಸಬನಂತೆ ಕಂಡಿರಬೇಕು. ನೀವು ಹತ್ತಲಾಗದೇ ಹೋದುದನ್ನು ಗಮನಿಸಿರಬೇಕು. ನಿಮ್ಮಂಥದೇ ಪೋರ ಒಬ್ಬ - ಎಲ್ಲಿ ಹೊರಟಿದ್ದೀರಿ ಅಂತ ಕೇಳಿದ. ನನಗೆಲ್ಲಿ ಗೊತ್ತಾಗಬೇಕು ಸ್ಟೇಷನ್ ಹೆಸರು ಧೋಬಿಘಾಟ್ ಅಂದುಬಿಟ್ಟೆ. ಹಾಗಾದರೆ ಮಹಾಲಕ್ಷ್ಮಿಯಲ್ಲಿ ಇಳಿಯಿರಿ. ಇಲ್ಲೇ ನಿಲ್ಲಿ. ನಿಮ್ಮವರು ಹಿಂದಿನ ರೈಲಿನಲ್ಲಿ ಬಂದು ನಿಮ್ಮನ್ನು ಸೇರಿಕೊಳ್ಳುತ್ತಾರೆ ಎಂದ. ಇಳಿವಾಗ ಚೂರೂ ತ್ರಾಸಾಗದಂತೆ ಜನಾನೇ ಧಕ್ಕಾ ಕೊಟ್ಟು ಇಳಿಸಿ ಬಿಟ್ರಪಾ'' ಎಂದ. ನಿಷ್ಕಲ್ಮಷವಾದ ಸಾಮೂಹಿಕ ನಲ್ಮೆಯಿಂದಲೇ ಸಾಧ್ಯವಾದಂಥ ನಿರ್ಭಯ ಅವನ ನಿಲುವಿನಲ್ಲಿತ್ತು. ಅದು ಎಲ್ಲವನ್ನೂ ಹಗುರಗೊಳಿಸುವಂತಿತ್ತು. "ನಡೀರಿ ಧೋಬಿಘಾಟ್!" ಎಂದ ಅದೇ ಉಮೇದಿಯಲ್ಲಿ.

ಮಹಾಲಕ್ಷ್ಮಿ ಸ್ಟೇಷನ್ನಿನ ಸೇತುವೆಯನ್ನೇರಿ ಸೀದಾ ರೇಸ್ ಕೋರ್ಸ್ ಕಡೆಯಿಂದ ಬಂದ ರಸ್ತೆಗೆ ಸೇರಿಕೊಂಡ ಮೂವರೂ ಬಲಕ್ಕೆ ಹೊರಳಿದರು. ಥಳಥಳ ಬಿಸಿಲಲ್ಲಿ ಹೊಳೆಯುವ ದೊಡ್ಡ ಐಸಿನ ತುಕಡಿಯೊಂದನ್ನು ತಳ್ಳುಗಾಡಿಯ ಮೇಲಿಟ್ಟುಕೊಂಡು ಜನರನ್ನು ಸೆಳೆಯುತ್ತ " ಟರ್ಬೂಜ್ ಶರ್ಬತ್...ಟರ್ಬೂಜ್ ಶರ್ಬತ್'' ಎಂದು ಕೂಗುತ್ತಿದ್ದ ಶರ್ಬತ್‌ವಾಲಾ ಐಸಿನ ಸಣ್ಣ ತುಕಡಿಗಳನ್ನು ಬ್ರಹ್ಮಾಂಡದಂಥ ಪಾತ್ರೆಯೊಳಗೆ ಒಂದು ಉದ್ದ ಸ್ಟೀಲಿನ ಸೌಟಿನಿಂದ ತಿರುವುತಿದ್ದ. ಸನಿಹ ಹಾಯುವಾಗ ಟರ್ಬೂಜಿನ ಶರ್ಬತ್ತಿನ ಘಮ ದಿವ್ಯವಾಗಿ ಆವರಿಸಿಕೊಳ್ಳುತ್ತಿತ್ತು. ನಸುನಗೆಯಲ್ಲೇ ಮೂವರ ಅಭೀಪ್ಸೆಗಳು ಒಂದಾಗಿ, ನಿಂತು ಚಪ್ಪರಿಸುತ್ತ ಕುಡಿದರು. ಅವನು "ಇನ್ನೂ ಒಂದು ರಿಪೀಟ್ ತಗೊಳ್ಳಿ'' ಎಂದು ಮತ್ತೆ ಸೌಟಿನಿಂದ ಹಾಕಿದ. ಚಪ್ಪರಿಸುತ್ತ ಮುಗಿಸಿದರು. ಹತ್ತು ನಿಮಿಷಗಳ ಹಿಂದಿನ ದುಸ್ವಪ್ನವೇ ಸುಳ್ಳು ಅನಿಸಿತು. ಬಾಬಾ ನಡುನಡುವೆ ಗ್ಲಾಸಿನಲ್ಲಿಯ ಶರ್ಬತ್ತನ್ನೇ ನಿರುಕಿಸುತ್ತ ಹುಬ್ಬು ಹಾರಿಸಿ ತಲೆ ಅಲ್ಲಾಡಿಸುತ್ತ ಕುಡಿಯುತ್ತಿದ್ದ. ಕುಡಿದು ಮುಗಿಸಿದ ಮೇಲೆ ಅವನಿಗೊಂದು ಶರಬತ್ತಿನ ಮೀಸೆ ಮೂಡಿತು. ಹಸ್ತಾಕ್ಷರ ಅದನ್ನು ಕರವಸ್ತ್ರದಿಂದ ಒರೆಸಿ, ನಿಂತಲ್ಲಿಂದಲೇ "ಬಾಬಾ ಅಲ್ನೋಡಿ ಅದು ರೇಸ್‌ಕೋರ್ಸು, ಅಲ್ಲಿ ಕುದುರೆಗಳ ರೇಸು ನಡೆಯುತ್ತದೆ. ಅಲ್ಲಿ ನೋಡಿ ಸಮುದ್ರದ ಕಡೆ - ಅಲ್ಲಿ ಹಾಜಿ ಅಲಿ ದರ್ಗಾ ಇದೆ ನೀರಿನಲ್ಲಿ. ಮತ್ತೆ ಮತ್ತೆ ಈ ಕಡೆ ನೋಡಿ...'' ಎಂದು ನಾಟಕೀಯವಾದ ಬಿಡುವು ಕೊಟ್ಟು ಅವರ ಹೆಗಲನ್ನು ಹಿಡಿದು ಅವರನ್ನು ಇದ್ದಲ್ಲಿಯೇ ತುಸು ತಿರುಗಿಸಿ - "ಬಾಬಾ ದೋಭಿಘಾಟ್'' ಎಂದ. ದೂರದಲ್ಲಿ ಒಣಹಾಕಿದ ಸಾಲು ಸಾಲು ಬಟ್ಟೆಗಳದ್ದೇ ಮಹಾ ಉಪಗ್ರಹ ಗೋಚರಿಸಿತು. ಆದಷ್ಟು ಅದರ ವಿಹಂಗಮ ನೋಟ ಸಿಗುವಂತೆ ಮೇಲ್ ಸೇತುವೆಯ ಅಂಚಿಗೆ ಹೋಗಿ ಮೂವರೂ ನಿಂತರು.



ನೋಡಿದಲ್ಲೆಲ್ಲಾ ನೀರಿನ ಹೌದುಗಳು, ಬೃಹತ್ ನಾಲೆಗಳು, ಎತ್ತಿ ಎತ್ತಿ ಬಟ್ಟೆಗಳನ್ನು ಸಾಲು ಸಾಲು ಸಿಮೆಂಟು ಕಟ್ಟೆಗಳ ಮೇಲೆ ಬಡಿಯುವ ಅಸಂಖ್ಯ ರಟ್ಟೆಗಳು.. ಇಡೀ ಶಹರದ ಬಟ್ಟೆಗಳ ಮಹಾ ಸ್ನಾನಘಟ್ಟದಂತೆ ಅದು ಪ್ರವೃತ್ತವಾಗಿತ್ತು. ಆಸ್ಪತ್ರೆ, ಹಾಸ್ಟೇಲು, ಹೊಟೇಲುಗಳು, ವಸತಿಗೃಹಗಳಿಂದ ಹಿಡಿದು ಉಪನಗರದ ಅಸಂಖ್ಯ ಲಾಂಡ್ರಿಗಳಿಂದ ಹೊರಟ ಬಟ್ಟೆಗಳು ಇಲ್ಲಿ ಬಂದು ತಲುಪಿ ಮಡಿಗೊಳ್ಳುತ್ತಿದ್ದವು. ನಾಗರಿಕತೆಯ ಮಹಾಯಜ್ಞವೊಂದು ಅಲ್ಲಿ ನಡೆಯುತ್ತಿತ್ತು. ಎಷ್ಟೆಲ್ಲ ವರುಷಗಳಿಂದ ದೇಶದ ನಾನಾ ಭಾಗಗಳಿಂದ ಅನ್ನ ಅರಸಿ ಬಂದು ಈ ದಿಂಡಿಯಲ್ಲಿ ಪಾಲ್ಗೊಳ್ಳುತ್ತ ಇಲ್ಲೇ ನೆಲೆಗೊಂಡ ಕಷ್ಟಾಳುಗಳು ಎಲ್ಲರೂ. ನೀರಿನ ಹೌದುಗಳೆಲ್ಲ ಬಿಸಿಲಿಗೆ ಕನ್ನಡಿಗಳಂತೆ ಹೊಳೆಯುತ್ತಿದ್ದವು. ಬಾಬಾನ ಕಣ್ಣಿಗೆ ಎಲ್ಲವೂ ಸ್ಫುಟವಾಗಿತ್ತು ತಿಳಿಯಾಗಿತ್ತು. ಅದೆಷ್ಟೋ ಅಸಂಖ್ಯ ಅನಾಮಿಕ ಧಾರೆಗಳೇ ಇಲ್ಲಿಯ ತನಕ ಬಂದು ನಾಲೆಗಳಾಗಿ ಈ ಇಡೀ ಕಾಯಕದಲ್ಲಿ ಪಾಲ್ಗೊಂಡಿವೆ. ಕುಟುಂಬ ಕುಟುಂಬಗಳು ತಪಸ್ಸಿನಂತೆ ತೊಡಗಿವೆ. ಅನುಗಾಲದ ದಿನನಿತ್ಯದ ಆಷಾಢ ಏಕಾದಶಿ ಇದು. ಅಗಣಿತ ವಿಠೋಬ ರುಕುಮಾಯಿಗಳು ಇಲ್ಲಿ ನಿರತರಾಗಿದ್ದಾರೆ. ಬಾಬಾ "ಅಬಾಬಾಬಾಬ'' ಎಂದು ಬಿಸುಸುಯ್ದ. "ಸಿನಿಮಾ ಸ್ಟುಡಿಯೋಗಳ, ನಾಟಕ ಮಂಡಳಿಗಳ ಕಾಸ್ಟ್ಯೂಮುಗಳು, ಕೊನೆಯಿಲ್ಲದ ಚಾಳುಗಳ ಕಿಟಿಕಿ ಬಾಗಿಲ ಪರದೆಗಳು ಎಲ್ಲವೂ ಇಲ್ಲಿ ಬರ್ತಾವೆ'' ಸಾನೆ ವಿವರಗಳನ್ನು ಕೊಡಲು ಮುಂದಾದ. ಸಾವಿರಾರು ರಟ್ಟೆಗಳು ಬಟ್ಟೆಗಳನ್ನು ಕಟ್ಟೆಗೆ ಬಡಿಯುವ ಸದ್ದು ದೂರದಲ್ಲಿದ್ದರೂ ತನ್ನದೇ ಲಯದಲ್ಲಿ ಬಾಬಾನ ಅಂತಃಕರಣಕ್ಕೆ ತುಂತುರುಗಳ ತಂಪಿನೊಂದಿಗೆ ಕೇಳಿಬರುತ್ತಿತ್ತು. ಅದರಲ್ಲಿ ಗಾಣಗಾಪುರದ ಭೀಮಾ ಪಾವಟಿಗೆಗಳ ಮೇಲೆ ಊರ ಮಹಿಳೆಯರು ಎತ್ತೆತ್ತಿ ಒಗೆಯುತ್ತಿದ್ದ ಬಟ್ಟೆಯ ಸದ್ದೂ ವಿಲಯನಗೊಂಡಿತ್ತು. ಪಂಢರಪುರದ ದಿಂಡಿಯ ದಾರಿಯ ಮೃದಂಗ ನಾದದೊಂದಿಗೆ ಬೆಳಿಗ್ಗೆಯಷ್ಟೇ ಹಾಯುವ ರೈಲಿನಿಂದ ಚೆಲ್ಲಿ ಬಂದ ತಾಳದ ಸದ್ದೂ ಅನುರಣಿಸುತ್ತಿತ್ತು. "ನೂರಾರು ವರ್ಷಗಳಿಂದ ಮುಂಬಯಿಯ ಬಂದರಿಗೆ ಬಂದು ಲಂಗರು ಹಾಕುತ್ತಿದ್ದ ಸಹಸ್ರಾರು ಸರಕಿನ ಹಡಗುಗಳ ಕಲಾಸಿಗಳ ಕೂಲಿಗಳ ಬಟ್ಟೆಗಳನ್ನು ತೊಳೆಯಲೆಂದೇ ರೂಪುಗೊಂಡ ಜಾಗವಂತೆ ಇದು. ನಂತರ ಈ ಪರೇಲ್ ಮತ್ತು ಹಳೆ ಕೋಟೆ ಪ್ರದೇಶದ ಎಲ್ಲ ಬಟ್ಟೆ ಗಿರಣಿಗಳ ಮತ್ತು ಇತರ ಕಾರ್ಖಾನೆಗಳ ಕಾರ್ಮಿಕರ ಸಮವಸ್ತ್ರ, ಬಟ್ಟೆಗಳು ಇಲ್ಲಿ ಒಗೆಯಲ್ಪಡುತ್ತಿದ್ದವು'' ಎಂದು ಸಾನೆಯ ವೀಕ್ಷಕ ವಿವರಣೆಯೂ ಅದೇ ಶ್ರುತಿಯಲ್ಲಿ ನಡೆದೇ ಇರುವಾಗ ಬಾಬಾ ಎರಡೂ ಕೈಗಳನ್ನು ಪ್ರಶಾಂತವಾಗಿ ಮೆಲ್ಲಗೆ ಹೂವಿನಂತೆ ಜೋಡಿಸಿ "ಪುಣ್ಯದ ಕೆಲಸ... ಜಾಗೃತ ಜಾಗ ಇದು'' ಎಂದು ಮೆಲುವಾಗಿ ನುಡಿದು ಕಣ್ಮುಚ್ಚಿ ತಲೆಬಾಗಿದ.

ಹಸ್ತಾಕ್ಷರನಿಗೆ ಮನಸ್ಸು ತುಂಬಿ ಬಂತು. ಇಡೀ ಶಹರದ ಅಗಣಿತ ಭೂಮಿಕೆಗಳ ಮಹಾ ಪ್ರಸಾಧನ ಸೀಮೆಯೇ ಎದುರಿಗಿರುವಂತೆ ಅವನಿಗೆ ತೋರಿತು. ಶಾಲ್ಮಲಿಯ ಹೊಸ ಪಾತ್ರ ಅಲ್ಲಿದೆ. ಬಾಬ್ಲಾ ಮತ್ತು ಗೋಮತಿದೀದಿ ದೊಡ್ಡ ದೊಡ್ಡ ನೌವಾರಿ ಸೀರೆಯನ್ನು ಎರಡೂ ಕಡೆ ಒಬ್ಬೊಬ್ಬರು ಹಿಡಿದು ಗಾಳಿಯಲ್ಲಿ ಬಿಸಿಲಿಗೆ ಉಯ್ಯಾಲೆಯಂತೆ ಜೀಕುತ್ತಿದ್ದಾರೆ. ತಾವು ಮಾರುವ ಶೇಂಗಾ ಪೊಟ್ಟಣದಷ್ಟೇ ಸಪೂರವಿರುವ

PAGE DONATED BY : **SHRI ROKESH HEGDE & FAMILY, DAHISAR**

# The Essence of Bhagavad-Gita

✍ **Shraddha Hegde (BE-Engg)**



**Moksha Sanyaasa Yoga :** This 78-verses long Concluding chapter of Bhagavad-Gita is considered to be the summary of the whole Gita. It emphasizes on the path to attain brahman. It starts with Arjun requesting Shree Krishna to educate him on difference between sanyaasa (renunciation of actions) and tyaaga (renunciation of desires) . Giving up activities which is related to material desires is what a sanyasi does. And quitting results for the activities is the quality of a tyaagi. However, Shri Krishna declares that all actions like sacrifice, charity, penance, etc. should never be given up. It helps us to purify our souls and acts in advancement of our society. One should perform these actions as a matter of duty without any expectation of fruits.

How the three gunas manifest in person's every action is also described here. Then the five causes of accomplishment of actions without which no activity can be done is explained. They are listed as follows-the foundation, the doer, the instruments, energy and divinity. He who possesses real insight and is with pure intention is not bound by the consequences of his actions either good or bad. There are three kinds of incentives to daily action; knowledge, the object of knowledge and the knower-all of which are governed by three modes of material nature. Further in the chapter, varna system and the attributes of a self-realized person are reiterated. The duties of the Brahmins, Kshatriyas, Vaishyas, and Shudras-are distributed according to their qualities, in accordance with their gunas (and not by birth). As per our lord, Arjuna can achieve the supreme stage by performing his duty , controlling his mind and body with determination, free from attachment to material world.

The lord has already imparted the most confidential and best spiritual advice to Arjuna. Krishna then gives option to his dear friend to do as he wishes. The eighteenth chapter and the Gita concludes with Arjuna accepting Shri Krishna's teachings. It appears that Sanjaya could also see this universal form of Shri Krishna by the grace of great sage Vyaasa. The Bhagavad-Gita began with the enquiry of Dhritarashtra about his sons in Kurukshetra. Sanjaya, after narrating this scene from the battlefield to Dhritarashtra, ecstatically recollects the wondrous form of Krishna and predicts victory for Arjuna. We can see that Bhagavad-Gita is not a principle of commandments, but a logical advice given to humanity. We must draw conclusion ourselves from the truth and find liberation. Thus, anyone who studies the Gita with good intent is on the pathway to attain the Supreme.

*(To be continued...)*

---

"ಟೈಂ ಪಾಸ್" ಪೋರ ಪೋರಿಯರು ಶಹರದ ಆಗಸದ ಈ ತುದಿಯಿಂದ ಆ ತುದಿಗೆ ಬಳ್ಳಿಯನ್ನು ಕಟ್ಟುತ್ತಿದ್ದಾರೆ. ಅದರ ಮೇಲೆ ಬಿಳಿ ಬೆಡ್ ಶೀಟುಗಳು ನಾನಾ ಬಣ್ಣಗಳನ್ನು ತಾಳುತ್ತ ಪರಪರೆಯ ತೋರಣದಂತೆ ಗಲಗಲಿಸುತ್ತಿವೆ. ಆಸ್ಪತ್ರೆಯ ಆಪರೇಷನ್ ಥೇಟರಿನಲ್ಲಿ ವೈದ್ಯರು, ದಾದಿಯರು ಹಾಕಿಕೊಂಡ ನಿಲುವಂಗಿಗಳು ಮುಖವಸ್ತ್ರಗಳು, ರೋಗಿಗಳ ಬೆಡ್‌ಶೀಟುಗಳು, ಜೇಲು ರಿಮಾಂಡ್ ಹೋಮಿನ ಸಮವಸ್ತ್ರಗಳು... ಎಲ್ಲ ಇಲ್ಲಿ ಮಡಿಗೊಳ್ಳುತ್ತಿವೆ. ಎಂದೋ ನಿಂತು ಹೋಗಿ ಪಾಳು ಬಿದ್ದಿರುವ ಸ್ತಬ್ದ ಗಿರಣಿ ಕಾರ್ಖಾನೆಗಳ ಗಾರೆ ಕಳಕೊಂಡ ನಗ್ನ ಇಟ್ಟಿಗೆಗಳ ಭಗ್ನ ಚಿಮಣಿಗಳು ಆರ್ತವಾಗಿ ಇನ್ನೂ ಆಗಸಕ್ಕೆ ಕೈ ಎತ್ತಿಯೇ ಇವೆ. ಅವುಗಳ ಗೋಡೆಗಳಾಚೆಯಿಂದ ಅಂಗನವಾಡಿಯ ಆರ್ಶಿಯಾ ಮಾಂಶಿಯರು "ಟೈಂ ಪಾಸ್" ಶೇಂಗಾ ಮಕ್ಕಳನ್ನು ಎಲ್ಲೋ ಕೂರಿಸಿ ಹಾಡಿಸುತ್ತಿರುವ "ಹಂ ಕೋ ಮನ್ ಕಿ ಶಕ್ತಿ ದೇನಾ..." ಹಿಂಜಿ ಹಿಂಜಿ ಬರುತ್ತಿದೆ. ಸ್ಪುಟವಾದಷ್ಟೂ ವಿವರಗಳು ಜುಜುಬಿಯಾಗುತ್ತಿಲ್ಲ ಇಲ್ಲಿ. ಬದಲಿಗೆ ಘನವಾಗುತ್ತಿವೆ. ಬಾಬ್ಲಾನ ಬೃಹತ್ ಡಾನ್ ಪೋಸ್ಟರಿನಂತೆ ಪ್ರತಿಯೊಬ್ಬರೂ ತಮ್ಮ ತಮ್ಮ ಪುಟ್ಟ ಚೌಕ ತುಂಬುತ್ತಿದ್ದಾರೆ. ಎಲ್ಲ ಒಂದಕ್ಕೊಂದು ಸೇರಿ ವಿರಾಟ್ ನೋಟ ಸ್ಫುಟವಾಗುತ್ತಿದೆ. ಒಂದು ಗಂಟೆಯ ಹಿಂದೆ ರೈಲು ಡಬ್ಬಿಯಲ್ಲಿ ಬಾಬಾನಿಗೆ ಧೈರ್ಯ ನೀಡಿದ ತಾನೆಂದೂ ನೋಡಿರದ ಅನಾಮಿಕ ಸಹಪಯಣಿಗನೂ ಇಲ್ಲಿದ್ದಾನೆ. ಅವನಿಗೆ ಬಾಲಾನ ಮುಖವಿದೆ. ನಮಗೆ ಕಿಂಚಿತ್ ಧೈರ್ಯ ನೀಡಿ ಮಾಯವಾದ ರೈಲಿನ ಮಹಿಳೆಯ ಕಾಳಜಿಯ ನೋಟವಿದೆ. ಅದಕ್ಕೆ ಪಿಂಪಳಖೋಟೆ ಮಾಸ್ತರರ "ಮೃಗನಯನಾ..." ಹಾರ್ಮೋನಿಯಂ ಸ್ವರ ಇದೆ. ಪ್ರತಿ ಝುರಿಗೂ ತೊರೆಗೂ ನದಿಗೂ ಅದರ ಹರಿವೇ ಮುಕ್ಕಾಮು.

ಈ ಇಡೀ ಪ್ರದೇಶ ಮಳೆ ನಿಂತು ಹೋದ ಮೇಲಿನ ನೆಲದಂತೆ ಒಂದು ಬಗೆಯ ಒದ್ದೆ ಪ್ರಭೆಯಲ್ಲಿ ವಿಲೋಭನೀಯವಾಗಿ ಹೊಳೆಯುತ್ತಿತ್ತು. ವಿಶಿಷ್ಟವಾದ ಮಿನುಗಿನ ಪ್ರತಿಫಲನ ಎಲ್ಲ ಮುಖಗಳಿಗೊಂದು ಕಾಂತಿಯ ಲೇಪನವನ್ನು ಕೊಡುತ್ತಿತ್ತು. ಎಲ್ಲರ ಮೂಲಕ ವಿದ್ಯುತ್ ಪ್ರವಾಹದಂತೆ ಅಮೂಲ್ಯ ಅಭಯದ ಹುರುಪೊಂದು ಹಾಯುತ್ತ ಈ ಕ್ಷಣದಲ್ಲಿ ಎಲ್ಲರ ವಯಸ್ಸೂ ಒಂದೇ ಅನಿಸುತ್ತಿತ್ತು. ತಾನು ಯಾವಾಗ ಮಾತು ನಿಲ್ಲಿಸಿದೆ ಅಂತ ಸಾನೆಗೂ ಗೊತ್ತಾಗಲಿಲ್ಲ. ಮೃದುವಾಗಿ ಕೈಜೋಡಿಸಿಕೊಂಡೇ ನಿಂತಿದ್ದ ಬಾಬಾನ ಬೆನ್ನು ನೇವರಿಸಿ ಹಸ್ತಾಕ್ಷರ "ಜೊತೆಗೆ ಚಂದಾತಾಯಿ ಇರಬೇಕಿತ್ತು ಅಲ್ಲಾ?" ಎಂದ. ಅದಕ್ಕೆ ದಿಗಂಬರ "ಛೆ ಛೆ.. ಇದಾಳಲ್ಲ ಇಲ್ಲೇ" ಎನ್ನುತ್ತ ಎರಡೂ ಕೈಗಳನ್ನು ವಿಶಾಲವಾಗಿ ಚಾಚಿದ ಇಡೀ ಪ್ರಪಂಚವನ್ನೇ ಆಲಂಗಿಸುವಂತೆ...

(ಮುಗಿಯಿತು)

(ಸೌಜನ್ಯ : ಅನಾರ್ಕಲಿಯ ಸೇಫ್ಟಿಪಿನ್)

*PAGE DONATED BY : **SHRI ANANT GANESH BHAT, BANDRA & FAMILY***

# ಆರ್ಥಿಕ ಭದ್ರತೆಗೆ ಬೇಕಾದ ಜೀವನಶೈಲಿ : ಒಂದು ಚಿಂತನೆ

✍ ಡಾ. ಜಿ. ವಿ. ಜೋಶಿ

*(ಹಿಂದಿನ ಸಂಚಿಕೆಯಿಂದ)*

ಇನ್ನೊಂದು ಚೌಪದಿಯಲ್ಲಿ ರಾಷ್ಟ್ರೀಯ ಯೋಜನೆಯ ಮೇಲೆ ವ್ಯಂಗ್ಯದ ಚಾಟಿ ಬೀಸುವಾಗಲೇ ಮಿತವ್ಯಯ ಭದ್ರ ಬದುಕಿಗೆ ಸೋಪಾನ ಎಂದು ತಿಳಿಸಿದರು ದೇಸಾಯಿ:

"ರಾಷ್ಟ್ರೀಯ ಯೋಜನೆಗೆ ಹಣ ಬೇಕು, ನೀರೆ.
ಆದಷ್ಟು ಚಿಕ್ಕದಾಗಲಿ ನಿನ್ನ ಸೀರೆ.
ನೀನು ಧರಿಸುವ ರವಕೆಗೂ ಬೇಡ ತೋಳು.
ಕಡಿಮೆ ಊಟಾ ಮಾಡಿ ಉಳಿಸೋಣ ಕಾಳು"

ದೇಶದ ಯೋಜನೆಗಳಿಗೆ ಬೇಕಾದ ಹಣ ಒದಗಿಸಲು ಶತಾಯ ಗತಾಯ ಪ್ರಯತ್ನಿಸಬೇಕಾದ ಅನಿವಾರ್ಯತೆಯ ಬಗೆಗೆ ದೇಸಾಯಿ ಸ್ವಲ್ಪ ವ್ಯಂಗ್ಯೋಕ್ತಿಯನ್ನು ಬಳಸಿದ್ದು ಹೌದಾದರೂ ಕೊಳ್ಳುಬಾಕತನದ ಅಪಾಯವನ್ನು ಅವರು ಸರಿಯಾಗಿ ಗುರುತಿಸಿದ್ದರು.

ಸಾಹಿತಿ ಎಸ್. ಎಲ್. ಭೈರಪ್ಪ ಸುಮಾರು ಎಂಟು ವರ್ಷಗಳ ಹಿಂದೆ ಗುಜರಾತದ ಜನರಿಗೂ, ಕರ್ನಾಟಕದ ಜನರಿಗೂ ಇರುವ ವ್ಯತ್ಯಾಸವನ್ನು ದೂರದರ್ಶನದ ಕಾರ್ಯಕ್ರಮದಲ್ಲಿ ತಿಳಿಸಿದ್ದು ಮನೋಜ್ಞವಾಗಿತ್ತು, ಗುಜರಾತದ ಜನ ಅನಗತ್ಯ ಖರ್ಚು ಮಾಡದೇ ಹಣ ಉಳಿಸುತ್ತಾರೆ, ಕರ್ನಾಟಕದ ಜನ ಹಣ ಉಳಿಸದೇ ಅನಗತ್ಯ ಖರ್ಚು ಮಾಡುತ್ತಾರೆ ಎಂದು ಅವರು ಹೇಳಿದ್ದರು. ಅನಗತ್ಯ ಖರ್ಚು ಮಾಡುವುದು ಕೊಳ್ಳುಬಾಕುತನವನ್ನು ಪ್ರತ್ಯಕ್ಷಪಡಿಸುವ ಒಂದು ಸ್ಪಷ್ಟ ಲಕ್ಷಣ. ಈಗಲೂ ಜಾಗತಿಕ ಅರ್ಥ ವ್ಯವಸ್ಥೆಯ ಹೆಚ್ಚಿನ ರಾಷ್ಟ್ರಗಳಲ್ಲಿ (ವಿಶೇಷವಾಗಿ ಗಣನೀಯ ಸಂಖ್ಯೆಯಲ್ಲಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ) ಬೇಕಾಗಿರುವುದು ಉಳಿತಾಯದ ಪ್ರವೃತ್ತಿಯೇ ಹೊರತು ಕೊಳ್ಳುಬಾಕುತನದ ಸಂಸ್ಕೃತಿಯಲ್ಲ.

ಇತ್ತೀಚಿನ ವರ್ಷಗಳಲ್ಲಿ ಭಾರತದ ಯುವಕರಲ್ಲಿ ಉಳಿತಾಯದ ಆಸಕ್ತಿ ಕಡಿಮೆಯಾಗುತ್ತಿರುವುದನ್ನು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್) 2019 ರಲ್ಲಿ ಗಣನೆಗೆ ತೆಗೆದುಕೊಂಡಿತ್ತು. ಕೌಟುಂಬಿಕ ಉಳಿತಾಯದ ಪ್ರಮಾಣ 2010 ರಲ್ಲಿ ಶೇ. 10ರಷ್ಟು ಇದ್ದದ್ದು 2018 ರ ಹೊತ್ತಿಗೆ ಶೇ. 6.8 ಕ್ಕೆ ಕುಸಿದಿದ್ದನ್ನು ಅದು ಗಂಭೀರವಾಗಿ ಪರಿಗಣಿಸುತ್ತ ಅದು ಭಾರತದಲ್ಲಿ ಹದಿ ಹರೆಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಅವರಲ್ಲಿ ಉಳಿತಾಯ ಮಾಡುವ ಪ್ರವೃತ್ತಿ ಮಾತ್ರ ಸಾಕಷ್ಟು ಕಡಿಮೆ ಇದೆಯೆಂದು ಎಚ್ಚರಿಸಿತ್ತು. ಭಾರತದಲ್ಲಿ ಕೌಟುಂಬಿಕ ಉಳಿತಾಯದ ಪ್ರಮಾಣ ಇಳಿಮುಖವಾಗುತ್ತಿದ್ದು, ದೇಶದ ಯುವ ಸಮೂಹದಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡುವಂತೆ ಕೇಂದ್ರ ಸರಕಾರಕ್ಕೆ ಐ.ಎಂ.ಎಫ್ ಒತ್ತಾಯಿಸಿತ್ತು. ಇದು ಸಹ ದೇಶದ ಆರ್ಥಿಕ ಭದ್ರತೆಗೆ ಬೇಕಾದ ಉಳಿತಾಯದ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವನ್ನು ಸ್ಪಷ್ಟವಾಗಿ ತೋರಿಸಿದೆ.

